ನಂತರ ಪೇಯಿಂಟ್ ಮಾಡಿಸಿದೆ. ಈ ಘಾಟು ವಾಸನೆಯಿಂದ ಬೇರೆ ಯಾವುದೇ ವಾಸನೆಗಳು ತಿಳಿಯೋದಿಲ್ಲ. ಆದರೆ ಆವೇಶದಲ್ಲಿ ಆ ಮೊಬೈಲ್ ಫೋನನ್ನು ಆ ಕತ್ತಲಲ್ಲಿ ಎಲ್ಲಿ ಎತ್ತಿ ಬಿಸಾಕಿದೆ ಎಂದು ಹುಡುಕಲು ಮರೆತು ಬಿಟ್ಟೆ. ಒಡೆದು ಚೂರಾಗಿದೇಂತ ಭಾವಿಸಿದ್ದೆ. ಆದರೆ... ಅದೇ ನನಗೆ ಮುಳುವಾಯಿತು' ಎಂದು ಹೇಳಿ ಮುಗಿಸಿದರು.

ಯಾವುದೋ ಮಹತ್ಕಾರ್ಯ ಮಾಡಿದವರಂತೆ ಹೇಳುತ್ತಿದ್ದ ಅವರನ್ನು ಕಂಡು ಇನ್‌ಸ್ಪೆಕ್ಟರ್ ಕುಲಕರ್ಣಿಯವರಿಗೆ ಒಮ್ಮೆ ನಡುಕ ಬಂದಂತಾಯಿತು. ಇವನು ನೋಡಲು ಮಾತ್ರ ಭಯಂಕರನಲ್ಲ ಮನಃಸ್ಥಿತಿಯೂ ಅಷ್ಟೇ ಭಯಂಕರ, ವಿಕೃತ, ವಿಕಾರವಾಗಿದೆ. ಇಂತಹವರು ಜನಗಳ ಮಧ್ಯೆ ಇರಲೇಬಾರದು. ಇದ್ದಷ್ಟು ಅಪಾಯಕಾರಿ!

ಇಳಂಗೋವನ್ ಅವರು ಸಾಕ್ಷಿಯ ಅಸ್ಥಿಪಂಜರವನ್ನು ಕರೆದು ಕೊಂಡು ಹೋಗಿ ತೋರಿಸಿದರು. ಅಲ್ಲಿಯೇ ಹಿಂಬಾಲಿಸಿ ಬಂದಿದ್ದ ಲೆಕ್ಚರ್ ಒಬ್ಬರನ್ನು ಕರೆದು ಪಂಚನಾಮೆ ಮುಗಿಸಿ, ಮಹಜರು ನಡೆಸಿದರು. ಸಾಕ್ಷಿಯ ಅಸ್ಥಿಪಂಜರವನ್ನು ಸಿಟಿಯ ಸರ್ಕಾರಿ ಆಸ್ಪತ್ರೆಯ ಶವಾಗಾರಕ್ಕೆ ಕಳುಹಿಸಿದರು. ಪ್ರಿನ್ಸಿಪಾಲರಿಗೆ ಫೋನಿನಲ್ಲಿ ಮಾತನಾಡಿ ನಂತರ ಭೇಟಿಯಾಗುವುದಾಗಿ ತಿಳಿಸಿ, ಪ್ರೊಫೆಸರ್ ಇಳಂಗೋವನ್ ಕೊಲೆ ಮಾಡಿದ ರೀತಿ, ತಾವೇ ಮಾಡಿದ್ದಾಗಿ ಒಪ್ಪಿಕೊಂಡಿದ್ದನ್ನು ವಿವರಿಸಿದರು. ಅವರನ್ನು ಬಂಧಿಸಿ ಪೊಲೀಸ್ ಸ್ಟೇಷನ್ ಕಡೆ ತನ್ನ ಜೀಪನ್ನು ತಿರುಗಿಸುವಂತೆ ಹೇಳಿದರು. ವಿಷಯ ಇಡೀ ಕಾಲೇಜು, ಕ್ಯಾಂಪಸ್‌ಗೆ ಬೆಂಕಿಯ ಜ್ವಾಲೆಯಂತೆ ಹರಡಿತು. ವಿಷಯದ ವಿವರ ಸಿಗದಿದ್ದರೂ ಪ್ರೊಫೆಸರ್ ಇಳಂಗೋವನ್ ಸಾಕ್ಷಿಯನ್ನು ಕೊಲೆ ಮಾಡಿದ್ದಾರೆಂದು ತಿಳಿದು ದಿಗ್ಭ್ರಾಂತರಾದರು! ಮಾನಸಿ ಮತ್ತು ಮೀರಾ ಬೆಚ್ಚಿ ಬಿದ್ದರು.

ಜೀಪು ಪೊಲೀಸ್ ಸ್ಟೇಷನ್ ಬಳಿ ಬಂದು ನಿಂತ ಕೂಡಲೇ ಇಳಂಗೋವನ್,

'ನನ್ನದೊಂದು ಕೋರಿಕೆ. ಆ ಹುಡುಗಿಯ ಮೊಬೈಲ್ ಫೋನಿನಲ್ಲಿರುವ ವಿಡಿಯೊವನ್ನು ದಯವಿಟ್ಟು ಡಿಲಿಟ್ ಮಾಡಿಬಿಡಿ...' ಎಂದು ಹೇಳಿಕೊಂಡರು.

'ಆ ಮೊಬೈಲ್ ಫೋನಿನಲ್ಲಿ ಯಾವ ವಿಡಿಯೊ ರೆಕಾರ್ಡ್ ಆಗಿರಲಿಲ್ಲ...' ಕುಲಕರ್ಣಿ ಶಾಂತವಾಗಿ ಹೇಳಿದರು.

## ಡಾ. ಎಚ್. ಗಿರಿಜಮ್ಮ

ಹುಟ್ಟಿದ್ದು ದಾವಣಗೆರೆ. ಮೈಸೂರು ವೈದ್ಯಕೀಯ ಕಾಲೇಜಿನಲ್ಲಿ ಶಿಕ್ಷಣ. ಅವರ ಮೊದಲ ಕತೆ 'ಹೂಬಳ್ಳಿಗೆ ಈ ಆಸರೆ' 'ಸುಧಾ' ವಾರಪತ್ರಿಕೆಯಲ್ಲಿ ಪ್ರಕಟವಾಗಿತ್ತು. 'ಹೂಬನ' ಕಾದಂಬರಿಯೂ ಇದೇ ವಾರಪತ್ರಿಕೆಯಲ್ಲಿ ಧಾರಾವಾಹಿಯಾಗಿ ಪ್ರಕಟವಾಗಿತ್ತು. 'ಚಂದಮಾಮ', 'ತಮಸೋಮ ಜ್ಯೋತಿರ್ಗಮಯ', 'ಅಂಬರತಾರೆ' ಸೇರಿದಂತೆ 27 ಕಾದಂಬರಿಗಳು, ಐದು ಕಥಾಸಂಕಲನಗಳು ಪ್ರಕಟವಾಗಿವೆ. 'ಅರ್ಧಾಂಗಿ', 'ಸಂಜೆಮಲ್ಲಿಗೆ', 'ಅನಾವರಣ' ಸೇರಿದಂತೆ ಅನೇಕ ನೀಳ್ಗತೆಗಳು 'ಮಯೂರ' ಮಾಸ ಪತ್ರಿಕೆಯಲ್ಲಿ ಪ್ರಕಟವಾಗಿವೆ. ಪ್ರಸ್ತುತ ದಾವಣಗೆರೆಯಲ್ಲಿ ನೆಲೆಸಿದ್ದಾರೆ.